ಕೃಷಿ ಮೇಳ – 2021

ಕೋವಿಡ್ ನಂತರದ ಕೃಷಿ-ರೈತರ ಆದಾಯ ದ್ವಿಗುಣ
ಮತ್ತು ಪೌಷ್ಠಿಕಾಂಶಗಳ ಭದ್ರತೆ

# ಪ್ರಗತಿಪರ ಕೃಷಿಕರ ಯಶೋಗಾಥೆಗಳು

(ಜಿಲ್ಲಾ ಮಟ್ಟದ ಶ್ರೇಷ್ಠ ರೈತ ಮತ್ತು ರೈತ ಮಹಿಳಾ ಪ್ರಶಸ್ತಿ ಪುರಸ್ಕೃತರು)



ವಿಸ್ತರಣಾ ನಿರ್ದೇಶನಾಲಯ
ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ,
ಶಿವಮೊಗ್ಗ-577 204

ಯಾವುದೇ ವ್ಯಕ್ತಿ, ಹೊಸತನಕ್ಕಾಗಿ ತುಡಿಯುತ್ತಿದ್ದರೆ ಆ ವ್ಯಕ್ತಿಗೆ ಅನುಭವವುಳ್ಳವರ ಸಲಹೆ, ಸಹಾಯ ತುಂಬಾ ಅಗತ್ಯ. ಇವುಗಳೆಲ್ಲಾ ಅವರಿಗೆ ಸರಿಯಾದ ಸಮಯದಲ್ಲಿ ದೊರೆತರೆ, ಅಂತಹ ಮನುಷ್ಯ ಸಾಧನೆಯ ದಿಕ್ಕಿನತ್ತ ಸಾಗಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಬ್ರಹ್ಮಾವರದ ಸಮೀಪದ ಹೆಗ್ಗುಂಜೆ ಗ್ರಾಮದ ಶ್ರೀಮತಿ ಸುಜಾತ ಶೆಟ್ಟಿ ವಿವಿಧ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಯಶಸ್ವಿಯಾಗಿದ್ದಾರೆ.



**ಶ್ರೀಮತಿ ಸುಜಾತ ಶೆಟ್ಟಿ**
ಕೋಂ ರಂಜಿತ್ ಶೆಟ್ಟಿ, ಸುರ್ಗಿಕಟ್ಟೆ,
ಮಂದಾರ್ತಿ, ಬ್ರಹ್ಮಾವರ
ಉಡುಪಿ ಜಿಲ್ಲೆ
ಮೊ: 89714 01837, 88613 61079



## ಸಮಗ್ರ ಕೃಷಿಪದ್ಧತಿಯಲ್ಲಿ ಸಂತಸ : ಉಡುಪಿ ಜಿಲ್ಲೆಯ ಪ್ರಗತಿಪರ ರೈತ ಮಹಿಳೆ ಶ್ರೀಮತಿ ಸುಜಾತ ಶೆಟ್ಟಿ

ಾವುದೇ ವ್ಯಕ್ತಿ, ಹೊಸತನಕ್ಕಾಗಿ ತುಡಿಯುತ್ತಿದ್ದರೆ ಆ ವ್ಯಕ್ತಿಗೆ ಅನುಭವವುಳ್ಳವರ ಲಹೆ, ಸಹಾಯ ತುಂಬಾ ಅಗತ್ಯ. ಇವುಗಳೆಲ್ಲಾ ಅವರಿಗೆ ಸರಿಯಾದ ಮಯದಲ್ಲಿ ದೊರೆತರೆ, ಅಂತಹ ಮನುಷ್ಯ ಸಾಧನೆಯ ದಿಕ್ಕಿನತ್ತ ಸಾಗಲು ಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಬ್ರಹ್ಮಾವರದ ಸಮೀಪದ ಹೆಗ್ಗುಂಜೆ ಗ್ರಾಮದ ಮತಿ ಸುಜಾತ ಶೆಟ್ಟಿ ವಿವಿಧ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಶಸ್ವಿಯಾಗಿದ್ದಾರೆ.

ಶ್ರೀಮತಿ ಸುಜಾತ ಶೆಟ್ಟಿಯವರು ಪದವೀಧರರಾಗಿದ್ದು, ತಮ್ಮ ಮೀನಿನಲ್ಲಿ ಭತ್ತ, ಅಡಿಕೆ, ತೆಂಗು, ಮಲ್ಲಿಗೆ ಕೃಷಿಯೊಂದಿಗೆ ಹೈನುಗಾರಿಕೆ ಗೂ ತೋಟಗಾರಿಕೆ ಬೆಳೆಗಳ ನರ್ಸರಿಯನ್ನು ನಡೆಸುತ್ತಿದ್ದಾರೆ. ಸುಧಾರಿತ ಷಿಪದ್ಧತಿಯಲ್ಲಿ ಅನುಸರಿಸಬೇಕಾದ ತಾಂತ್ರಿಕ ಜ್ಞಾನವನ್ನು ಬ್ರಹ್ಮಾವರದಲ್ಲಿರುವ ಷಿ ವಿಜ್ಞಾನ ಕೇಂದ್ರದ ಮೂಲಕ ಹೆಚ್ಚಿಸಿಕೊಂಡು ತಮ್ಮ ಜಮೀನಿನಲ್ಲಿ ಳವಡಿಸಿಕೊಂಡಿದ್ದಾರೆ. ಆ ಮೂಲಕ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು, ಹೆಚ್ಚಿನ ಆದಾಯವನ್ನು ಡೆಯುತ್ತಿದ್ದಾರೆ.

ಇವರು ಬ್ರಹ್ಮಾವರದ ಕೃಷಿ ವಿಜ್ಞಾನ ಕೇಂದ್ರದ ಮುಖೇನ ನರ್ಸರಿಯ ರಿತು ತರಬೇತಿಯನ್ನು ಪಡೆದುಕೊಂಡು ತಮ್ಮ ಜಮೀನಿನಲ್ಲಿ ನರ್ಸರಿ ಟಕವನ್ನು ಪ್ರಾರಂಭಿಸಿದ್ದಾರೆ. ಇಲ್ಲಿನ ಸ್ಥಳೀಯ ರೈತರಿಗೆ ವಿವಿಧ ತೋಟಗಾರಿಕಾ ಳೆಗಳ ಗಿಡಗಳಾದ ತೆಂಗು, ಅಡಿಕೆ, ಗೇರು, ಮಲ್ಲಿಗೆ, ಕಾಳುಮೆಣಸು, ವಿವಿಧ ಣ್ಣು ಹಾಗೂ ಹಲವಾರು ಹೂವಿನ ಗಿಡಗಳನ್ನು ಬೆಳೆದು ಮಾರಾಟ ಮಾಡಿ ಚ್ಚಿನ ಆದಾಯ ಪಡೆಯುತ್ತಿದ್ದಾರೆ.

ಅವರು ತಮ್ಮ ಮನೆಯ ವಠಾರದಲ್ಲಿ ಮಲ್ಲಿಗೆ ಕಟ್ಟೆಯನ್ನು ಪ್ರಾರಂಭಿಸಿ ಸ್ಥಳೀಯ ಮಲ್ಲಿಗೆ ಕೃಷಿಕರಿಗೆ ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದರೊಂದಿಗೆ ಮಲ್ಲಿಗೆ ಕೃಷಿಕರಿಗೆ ನೆರವಾಗಿದ್ದಾರೆ. ಕೃಷಿ ವಿಜ್ಞಾನ ಕೇಂದ್ರ, ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳ ನಿರಂತರ ಸಂಪರ್ಕದಿಂದ ತಾಂತ್ರಿಕ ಮಾಹಿತಿಯನ್ನು ಪಡೆಯುತ್ತಿದ್ದಾರೆ. ಅಲ್ಲದೆ ವಿವಿಧ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ನರ್ಸರಿ ಬಗ್ಗೆ ಮಾಹಿತಿ ನೀಡುತ್ತಿದ್ದು, ಆ ಮೂಲಕ ಇವರು ಓರ್ವ ಆದರ್ಶ ಮಹಿಳಾ ಕೃಷಿಕರಾಗಿದ್ದಾರೆ.

ಸಮಗ್ರ ಕೃಷಿ ಪದ್ಧತಿಯಲ್ಲಿನ ಇವರ ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಶ್ರೀಮತಿ ಸುಜಾತ ಶೆಟ್ಟಿ ಅವರಿಗೆ ಸನ್ಮಾನ ಪತ್ರ ಹಾಗೂ ನೆನಪಿನ ಕಾಣಿಕೆಯೊಂದಿಗೆ "ಜಿಲ್ಲಾ ಮಟ್ಟದ ಶ್ರೇಷ್ಠ ಪ್ರಗತಿಪರ ರೈತ ಮಹಿಳಾ ಪ್ರಶಸ್ತಿ–2021" ಅನ್ನು ನೀಡಿ ಗೌರವಿಸುತ್ತಿದೆ.